ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಹುಣಸೂರು ತಾಲ್ಲೂಕು ಪಕ್ಷಿರಾಜಪುರದಲ್ಲಿ ಪರಿಶಿಷ್ಟ ಜನಾಂಗದವರ ಮೇಲೆ ನಡೆದ ಹಲ್ಲೆ

+ ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಸಭಾಧ್ಯಕ್ಷರೇ, ನಮ್ಮ ತಾಲ್ಲೂಕಿನ ಪಕ್ಷಿರಾಜಪುರ ಎನ್ನುವಂಥ ಗ್ರಾಮದಲ್ಲಿ ಹಕ್ಕಿಪಿಕ್ಕಿ ಜನಾಂಗ ಮತ್ತು ಎಸ್.ಟಿ.ಜನಾಂಗ ವಾಸಮಾಡುವಂಥ ಮಾತಾವರಣ ಇದೆ. ಆ ಗ್ರಾಮದ ಇಡೀ ಯುವಕ ಬಂಧುಗಳು ಮತ್ತು ಮಹಿಳಾ ಬಂದುಗಳು ಸೇರಿ ನಮಗೆ ಸಾರಾಯಿ ಬೇಡ ಎನ್ನುವಂಥ ಒಂದು ಪ್ರತಿಭಟನೆಯನ್ನು ಮಾಡಿದ್ದಕ್ಕೆ ಏನಾಯಿತು ಎಂಬುದನ್ನು ಹೇಳುತ್ತೇನೆ. ಶಾಂತರೀತಿಯಲ್ಲಿ ಅನೇಕ ಸಾರಿ ತಮ್ಮ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ, ಅದನ್ನು ನನ್ನ ಗಮನಕ್ಕೂ ಕೂಡ ತಂದಿದ್ದಾರೆ. ನಾವು ಹಿಂದುಳಿದ ಜನಾಂಗ, ಹರಿಜನ-ಗಿರಿಜನ ಬಂಧುಗಳು ನೆಮ್ಮದಿಯಿಂದ ಗ್ರಾಮದಲ್ಲಿ ಬದುಕಬೇಕಾದರೆ ನಮಗೆ ದಯವಿಟ್ಟು ಸಾರಾಯಿ ಮುಕ್ತವಾದ ವಾತಾವರಣವನ್ನು ಗ್ರಾಮದಲ್ಲಿ ನಿರ್ಮಾಣ ಮಾಡಿ, ನೆಮ್ಮದಿಯಿಂದ ಬದುಕುವಂಥ ಅವಕಾಶವನ್ನು ಮಾಡಿಕೊಡಿ. ಸರ್ಕಾರ ಇನ್ನೇನೂ ಸವಲತ್ತನ್ನು ಕೊಟ್ಟು ನಮ್ಮ ಮನೆಯ ಬಾಗಿಲಿಗೆ ಸಾರಾಯಿಯನ್ನು ತಂದಿಟ್ಟಾಗ ಖಂಡಿತವಾಗಿ ಕೂಡ ನಾವು ನೆಮ್ಮದಿಯಿಂದ ಬದುಕಲಿಕ್ಕೆ ಸಾಧ್ಯವಿಲ್ಲ, ನಮ್ಮ ಆರ್ಥಿಕ ಯೋಜನೆ ಕೂಡ, ನಮ್ಮ ಸಂಸಾರದ ವ್ಯವಸ್ಥೆಯೂ ಕೂಡ ನೆಮ್ಮದಿಯಿಂದ ಇರಲಿಕ್ಕೆ ಸಾಧ್ಯವಿಲ್ಲ ಎನ್ನುವಂಥ ಮಾತನ್ನು ಅತ್ಯಂತ ಹೆಚ್ಚಾಗಿ ನಮ್ಮ ತಾಲ್ಲೂಕಿನಲ್ಲಿಕೊಟ್ಟಿದ್ದಾರೆ ಅದೇ ರೀತೀ ಗಿರಿಜನ ಬಂಧುಗಳು ಕೂಡ...

ಅಧ್ಯಕ್ಷರು : ಭಾಷಣ ಮಾಡಬೇಡಿ ನಿಮಗೆ ಒಬ್ಬರಿಗೂ ಸಮಯದ ಪ್ರಜ್ಞೆ ಇರುವುದಿಲ್ಲ, ಏನಾಗಿದೆ ಎಂಬುದರ ಗಮನವನ್ನು ಸೆಳೆಯುವಂಥ ಪ್ರಯತ್ನ ಮಡಿ.

ಶ್ರೀ ಜಿ.ಹೆಚ್. ವಿಜಯಶಂಕರ್ : ಸಾರಾಯಿ ಬೇಡ ಎನ್ನುವಂಥ ಒಂದು ವಿಚಾರವನ್ನು ತಲುಪಿಸಿದ್ದಕ್ಕಾಗಿ, ಸಾರಾಯಿ ಬೇಡ ಎಂದು ವಾಪಸ್ಸುಕಳುಹಿಸುವಂಥ ಕೆಲಸವನ್ನು ಆ ಗ್ರಾಮದಲ್ಲಿ ಯುವಕ ಬಂಧುಗಳು ಮಾಡದಿದ್ದಕ್ಕಾಗಿ ಸ್ವತ ಅಬಕರಿ ಅಧಿಕಾರಿಗಳು ಅನೇಕ ಸಾರಾಯಿ ಗುತ್ತಿಗೆದಾರರ ಗೂಂಡಾಗಳನ್ನು ಕರೆದು ಕೊಂಡಿಹೋಗಿ ರಾತ್ರಹೊತ್ತಿನಲ್ಲಿ ಹೆಂಗಸರು ಮಕ್ಕಳು ಇರುವಂಥ ಮನೆಯಲ್ಲಿ ನುಗ್ಗುತ್ತಾರೆ. ಆ ಗ್ರಾಮದ ಯಜಮಾನನನ್ನು ಕರೆದುಕೊಂಡು ಬಂದು ಬಡಿದು ವ್ಯಾನಿನಲ್ಲಿ ಎತ್ತಿ ಹಾಕುತ್ತಾರೆ, ಆ ಗ್ರಾಮದ ಯಜಮಾನನ ಮಕ್ಕಳಿಗೆ ಅಮಾನುಷವಾಗಿ ಹಲ್ಲೆಯನ್ನು ಮಾಡುತ್ತಾರೆ, ಇಡೀ ಮನೆಯಲ್ಲಿರುವಂಥ ಹೆಂಗಸರು ಮತ್ತು ಮಕ್ಕಳನ್ನು ಆಚೆಗೆ ತಳ್ಳಿ ಮನೆಯಲ್ಲಲನ ಪತ್ರೆ ಪಾಗಡಗಳನ್ನು ಎತ್ತಿ ಬಿಸಾಕುವಂಥ ವತಾವರಣವನ್ನು ನಿರ್ಮಾಣ ಮಾಡುತ್ತಾರೆ. ಗಿರಿಜನ ಬಂಧುಗಳು ದಿಕ್ಕೆಟ್ಟು ಓಡಿ ಗ್ರಾಮದಲ್ಲಿಯುತ್ತಿರುವಂಥ ಅನಾಹುತಗಳನ್ನು ನೋಡಿ ಗ್ರಾಮವನ್ನು ಬಿಟ್ಟು ರಾತ್ರೋರಾತ್ರಿ ಓಡಿಹೋಗುವಂಥ ವಾತಾವರಣವನ್ನು ಉಂಚು ಮಾಡಿದ್ದಾರೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಸ್ವತಃ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ ಹೌದು ನಮ್ಮ ಎದುರಿಗೆ ಹಲ್ಲೆ ನಡೆಯುತ್ತಿತ್ತು, ಆದರೂ ಕೂಡ ನಾವು ಅದನ್ನು ತಡೆಯುವಂತಹ ಸ್ಥಿತಿಯಲ್ಲಿರಲಿಲ್ಲ, ಗೂಂಡಾಗಳು ಹಲ್ಲೆ ಮಾಡಿರುವುದು ನಿಜ ಅನ್ನುವಂಥ ಮಾತನ್ನು ಅವರು ಒಪ್ಪಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಬಹಳ ಸ್ಪಷ್ಟವಾಗಿ ತಿಳಿಸುವುದೇನೆಂದರೆ, ಈ ಬುಡಕಟ್ಟು ಜನಾಂಗದವರ ಮೇಲೆ, ಗಿರಿಜನ ಬಂಧುಗಳ ಮೇಲೆ ಸಾರಾಯಿಬೇಡ ಎನ್ನುವಂಥ ಕಾರಣಕ್ಕೋಸ್ಕರ ಏನು ಹಲ್ಲೆಯನ್ನು ಮಾಡಿದ್ದಾರೆ ಆ ಅಧಿಕಾರಿಗಳನ್ನು ತಕ್ಷಣವೇ ಅಮಾನತ್ತಿನಲ್ಲಿಡಬೇಕು; ಈ ವಿಚಾರದಲ್ಲಿ ಏನು ನಡಯಿತು ಎಂಬ, ಸತ್ಯಾಂಶವನ್ನು ತಿಳಿಯುವುದಕ್ಕೋಸ್ಕರ ಸದನ ಸಮಿತಿಯನ್ನು ರನೆ ಮಾಡಬೇಕು;

ಮೂನೆಯದಾಗಿ, ಏನು ಇಡೀ ಗ್ರಾಮದವರು ಒಕ್ಕೊರಲಿನಿಂದ ನಮಗೆ ಸಾರಾಯಿ ಬೇಡ ಎನ್ನುವಂಥ ತಮ್ಮ ಮನವಿಯನ್ನು ಸರ್ಕಾರದ ಮುಂದೆ ಮತ್ತು ಜನತೆಯ ಮುಂದೆ ಇಟ್ಟಿದ್ದಾರೆ, ಆ ಗ್ರಾಮದ ಸಾರಾಯಿ ಪರವಾಗಯನ್ನು ತತಕ್ಷಣವೇ ರದ್ದುಮಾಡಿ ,ಅಲ್ಲಿ ಸರಾಯಿ ಅಂಗಡಿಯನ್ನು ಎತ್ತಿಸುವಂತಹ ಕೆಲಸವನ್ನು ಸರ್ಕಾರ ತತಕ್ಷಣವೇರದ್ದುಮಾಡಿ, ಅಲ್ಲಿ ಸಾರಾಯಿ ಅಂಗಡಿಯನ್ನು ಎತ್ತಿಸುವಂತಹ ಕೆಲಸವನ್ನು ಸರ್ಕಾರ ತತಕ್ಷಣವೇ ಮಾಡಬೇಕು. ಬುಡಕಟ್ಟು ಜನ, ಗಿರಿಜನ ಸಾರಾಯಿ ಬೇಡ ಎನ್ನುವುದಕ್ಕೋಸ್ಕರ ಏಟನ್ನು ತಂದಿದ್ದಾರೆ. ಬೂಟುಗಾಲಿನಲ್ಲಿ ಓಡೆತವನ್ನು ತಿಂದಿದ್ದಾರೆ. ಆದ್ದರಿಂದ ಈ ಒಂದು ವಿಚಾರದಲ್ಲಿ ಸದನಸಮಿತಿಯನ್ನು ರಚನೆ ಮಾಡಿ ಸತ್ಯಾಂಶವನ್ನು ಬಯಲಿಗೆಳಿಯಬೇಕು ಎನ್ನುವಂಥ ಮನವಿಯನ್ನು ಈ ಸಂದರ್ಭದಲ್ಲಿ ನಾನು ಮಾನ್ಯ ಸಭಾಧ್ಯಕ್ಷರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೋನ್ನೆ ಹುಣಸೂರು ತಾಲ್ಲೂಕಿನ ಪಕ್ಷಿರಾಜಪುರ ಎನ್ನುವಂಥ ಗ್ರಾಮದಲ್ಲಿ 4-8-95ರಂದು ರಾತ್ರಿ ಹತ್ತು ಗಂಟೆಗೆ ಅಬಕಾರಿ ಇನ್‌ಸ್ಪೆಕ್ಟರ್‌ಎನ್. ಶೆಟ್ಟಿ ಮತ್ತು ಎಕ್ಸೈಜ್ ಸಬ್‌ಇನ್‌ಸ್ಪೆಕ್ಟರ್ ಗುರುಸಿದ್ದಪ್ಪ ಇಬ್ಬರೂ ಬಂದು ಅಲ್ಲಿಂದ ಶರಾಬು ಮಾರಾಟ ಆಗಬಾರದು ಎಂದು ಏನು ಹೋರಾಟ ಮಾಡುತ್ತಿದ್ದರು, ನೀವು ಶರಾಬು ಮಾರುವುದನ್ನು ತಡೆಯೂತ್ತೀರಾ ಎಂದು ಸೂರತ್‌ಸಿಂಗ್ ಎನ್ನುವ ಯಜಮಾನರೊಬ್ಬರಿದ್ದರು ಅವರ ಮನೆಗೆ ನುಗ್ಗು ಹಲ್ಲೆ ಮಾಡಿ ಅವರನ್ನು ಎಳೆದು ಕೊಂಡು ಹೋಗಿ ಜೀಪಿನಲ್ಲಿ ಹಾಕಿಕೊಂಡಾಗ ಇದು ಏಕೆ ಹೀಗೆ ಮಾಡುತ್ತಿದ್ದೀರಿ ಎಂದು ಕೇಳುವುದಕ್ಕೆ ಬಂದ ಅವರ ಮಕ್ಕಳುಗಳಾದ ಶಿವಶಂಕರ್ ಮತ್ತು ಮಲ್ಲೇಶ್ ಇಬ್ಬರನ್ನೂ ಸಹ ಜೀಪಿನಲ್ಲಿ ತೆಗೆದುಕೊಂಡು ಹೋಗಿ ಹಣಸೂರಿನ ಮಿನಿವಿಧಾನಸೌಧ ಏನಿದೆ ಅಲ್ಲಿನ ಶೌಚಾಲಯದಲ್ಲಿ ಒಂದು ದಿವಸ ಕೊಡಿಹಾಕಿದ್ದಾರೆ; ಹಲ್ಲೆ ಮಾಡಿದ್ದಾರೆ, ಬೂಟ್ಸ್‌ನಲ್ಲಿ ಹೊಡೆದಿದ್ದಾರೆ. ಇದರದಮೇಲೆ ಬಂದು ಅವರ ಪ್ರೋಲಿಸ್ ಕಂಪ್ಲೆಂಟ್ ಕೂಟ್ಟಿದ್ದಾರೆ, ಆಸ್ಪಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಈ ಘಟನೆ ನಡೆದು ಐದು ದಿವಸ ಆಗಿದೆ, ಸದನ ನಡೆಯುತ್ತಿದೆ ಯೂವುದೇ ಭಯವಿಲ್ಲದೆ ಒಬ್ಬ ಷೆಡ್ಯೂಲ್ ಟ್ರೈಬ್ ಜನಾಂಗದವರ ಮೇಲೆ ಈ ತರಹ ಹಲ್ಲೆ ಮಾಡುತ್ತಿರುವಂತಹದ್ದು ಸರಿಯೇ? ನಮ್ಮ ಬಿ.ಜೆ.ಪಿ.ಯ ಶಾಸಕರು ಇಲ್ಲಿ ಪ್ರತನಿಧಿಸುತ್ತಿದ್ದಾರೆ. ಅದು 50-60ಮನೆಗಳಿರುವಂಥ ಒಂದು ಊರು ಅದು. ಭಾರತೀಯ ಜನತಾ ಪಾರ್ಟಿಯ ತಾಲ್ಲೂಕಿನ ಮಹಳಾ ಅಧ್ಯಕ್ಷೆ ಶ್ರೀಮತಿ ಮಾಲಾಸಿಂಗ್ ಎನ್ನುವವರು ಇರುವಂಥ ಒಂದು ಸಣ್ಣ ಗ್ರಾಮ ಮಾನ್ಯ ಅಧ್ಯಕ್ಷರೆ, ದುರುದ್ದೇಶದಿಂದ ಈ ಷೇಡ್ಯೂಲ್ ಟ್ರೈಬ್ ಜನಾಂಗದ ಮೇಲೆ ನಾವು ಶರಾಬು ಕುಡಿಯುವುದು ಬೇಡ, ಇಲ್ಲಗೆ ಸರಬರಾಜು ಮಾಡಬಾರದು ಎನ್ನುವಂಥ ಹೋರಾಟ ಇಡೀ ರಾಜ್ಯದಲ್ಲಿ ನಡೆಯತ್ತಿರುವಂಥ ಕಾಲದಲ್ಲಿ ಹಂತಹಂತವಾಗಿ ಇದನ್ನು ಕಂಟ್ರೀಲ್ ಮಾಡುತ್ತೇವೆ ಎಂದು ಹೇಳಿದಂತ ಕಾಲದಲ್ಲಿ, ಸದನ ನಡೆಯುತ್ತಿರುವಂಥ ಕಾಲದಲ್ಲಿ ಈ ರೀತಿ ಹರಿಜನ-ಗಿರಿಜನರ ಮೇಲೆ ದೌರ್ಜನ್ಯ ನಡೆದಾಗ ಬಹುಶ: ಇಲ್ಲಿ ಹರಿಜನ-ಗಿರಿಜನರಿಗೆ ರಕ್ಷಣೆ ಇಲ್ಲ ಎನ್ನುವಂಥ ಪರಿಸ್ಥಿತಿ ನರ್ಮಾಣವಾಗುತ್ತಿದೆ. ಸನ್ಮಾನ್ಯ ಅಧ್ಯಕ್ಷರೇ ನೀವು ಬೇರೆ ವಿಷಯಕ್ಕೆ ಹೋಗುವುದಕ್ಕೆ ಮುಂಚೆ ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಅಲ್ಲ ತಾವು ದಯಮಾಡಿ ಆಲೋಚನೆ ಮಾಡಬೇಕು. ನಾಲ್ಕೂವರೆ ಗಂಟೆ ಆಗಿದೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿನ್ನೆ ದಿವಸ ಅಂಥಹ ದಿರ್ಘವಾದ ಚರ್ಚೆಯಾದಗಲೂ ಸಹ ಎರಡು ನಿಮಿಷದಮೇಲೆ ಕನ್ನಡ ಮರಾಠಿ ವಿಷಯಗಳು ಬಂದಾಗ, ಮಹಾಜನ ಆಯೋಗದ ವರದಿ ವಿಷಯವೂ ಬಂದಾಗ ನಾನು ಎಂದು ಒಂದು ನಿಮಿಷದ ಮೇಲೆ ನಾನು ಮಾತನಾಡಲಿಲ್ಲ ಅಧ್ಯಕ್ಷರೇ ಆದರೆ ಇವತ್ತು

ಮುಖ್ಯಮಂತ್ರಿಗಳು ಇಲ್ಲ್ಲಿ ಇದ್ದಾರೆ. ಗೃಹಸಚಿವರು ಇದ್ದಾರೆ; ನಾವು ಹೇಳಿದಮೇಲೆ ಇವತ್ತು ಅಧಿಕಾರಿಗಳು ಅಲ್ಲಿಗೆ ತನಿಖೆಗೆ ಹೋಗಲ್ಲೆವಂಥದ್ದು, ಇದು ಈ ರಾಜ್ಯದಲ್ಲಿ ಹರಿನ-ಗಿರಿಜನರಿಗೆ ಸರ್ಕಾರದ ರಕ್ಷಣೆ ಇಲ್ಲದಂತಾಗುತ್ತದೆ. ಈ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದಾರೆ ಎನ್ನುವುದನ್ನು ಹೇಳಬೇಕುತ್ತದೆ ಇಲ್ಲದಿದ್ದರೆ ಬಹುಶಃ ನಾವು ಇಲ್ಲಿ ಕುಳಿತು, ನಮ್ಮ ಶಾಸಕರು ಹೇಗೆ ಹೋಗಿ ಅಲ್ಲಿ ಮುಖ ತೋರಿಸುತ್ತಾರೆ. ಕಣ್ಣೀರು ಹಾಕಿ ಕೊಂಡು ಬಂದು ನಾನು ಊರಿಗೆ ಹೋಗುವುದಿಲ್ಲ ಯಡಿಯೂರಪ್ಪನವರೇ, ಅಲ್ಲಿನ ಜನತೆಗೆ ಇವತ್ತು ರಕ್ಷಣೆ ಸಿಗದೆ ಇದ್ದರೆ ಇದ್ದರೆ ಎನ್ನುವ ಮಾತನ್ನು ಹೇಳುತ್ತಾರೆ. ಈ ಒಂದು ಪರಿಸ್ಥಿತಿ ನಿಜವಾಗಿ ರಾಜಕೀಯವಾ ಸೇಡು ತೀರಿಸಿಕೊಳ್ಳುವಂಥ ಪರಿಸ್ಥಿತಿ.. ಇದು ಸಾಧ್ಯವಾಗುವುದಿಲ್ಲ. ಇದನ್ನು ಖಂಡನೆ ಮಾಡುತ್ತೇನೆ. ಇದಕ್ಕೆ ದಯಮಾಡಿ ಗೃಹಸಚಿವರು ಇದಕ್ಕೆ ಉತ್ತರ ಕೊಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಅಲ್ಲ ಬೆಳಿಗ್ಗೆ ಪ್ರಶ್ನೋತ್ತರ ಕೂಡ ನಾವು ಕೈಬಿಟ್ಟು ನಾವು ಕರಾರಗಳನ್ನು ಪ್ರಾರಂಭ ಮಾಡಿದ್ದೇವೆ. ದಯಮಾಡಿ ಕೇಳಿ, ಇನ್ನೊಂದು ಇಬ್ಬರು ಮೂವರು ಪ್ರಸ್ತಾಪ ಮಾಡುವವರಿದ್ದಾರೆ. ಎಲ್ಲದ್ದಕ್ಕೂ ಉತ್ತರವಮೇಮಿ ಕೊಡಿಸುತ್ತೋನೆ.

ತಾವು ನನ್ನ ಮಾತನ್ನು ಕೇಳುತ್ತಿಲ್ಲ, ಅವರು ಪ್ರಸ್ತಪ್ ಮಾಡಿದಾದ ಮೇಲೆ ಇದಕ್ಕೆ ಉತ್ತರನ್ನು ಕೊಡಿಸೋಣ, ಆಮೇಲೆ ಮುಖ್ಯಮಂತ್ರಗಳ ಉತ್ತರ ಪ್ರಾರಂಭವಾಗುತ್ತದೆ. ಎಂದು ನಾನು ಹೇಳಿದ್ದ; ಮೊದಲು ಪ್ರಸ್ತಪ ಮಾಡಿಬಿಡಲಿ.

ಕುಂದಾಪುರದಲ್ಲಿ ಶಾಸಕರಿಗೆ ಅಗೌರವ

+ ಶ್ರೀ ಯು.ಆರ್. ಸಭಿಪತಿ (ಉಡುಪಿ) : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರನೇ ತಾರೀಖು ನಾನು ಕೊಂಕಣ ರೈಲ್ವೆ, ಭು ಸಂತ್ರಸ್ತರ ಬಗ್ಗೆ ಮಂಗಳೂರಿನಿಂದ ಕುಂದಾಪುರದವರೆಗೆ ಪಾದಯಾತ್ರೆ ಹೋಗಿದ್ದಾಗ ಕುಂದಾಪುರದಲ್ಲಿ ಒಂದು ವಿಚಿತ್ರ ಘಟನೆ. ಆವಾಗ ಸನ್ಮಾನ್ಯ ಬೈಂದೂರು ಕ್ಷೇತ್ರದ ಶಾಸಕರಾದ ಜಯರಾಮ ಶೆಟ್ಟರು ನನಗೆ ದೂರವಾಣಿ ಮೂಲಕ ಸುಮೂರು ಎಂಟುವರೆ ಗಂಟೆ ರಾತ್ರಿಯಲ್ಲಿ ಸ್ವಲ್ಪ ಬಂದುಹೋಗಿ ಇಲ್ಲೊಂದು ಗಲಾಟೆಯಾಗಿದೆಎಂದು ಹೇಳಿ ನನ್ನನು ಕರೆದಿದ್ದರು. ನಾನು ಅಲ್ಲಿಗೆ ಹೋಗಿದ್ದೆ. ಹೋಗುವಾಗ ಸುಮಾರು ಐನೂರು ಆರುನೂರು ಜನ ನಾಥ ಕಛೇರಿಯಲ್ಲಿ ಸೇರಿಕೊಂಡಿದ್ದಾರೆ. ಸನ್ಮಾನ್ಯ ಜಯರಾಮಶೆಟ್ಟರವರು, ಡೆಪ್ಯೂಟಿ ತಹಸೀಲ್ದಾರ್ ಶ್ರೀನಿವಸ್ ಎಂದು ಹೇಳಿ ಅವರೊಡನೆ ಒಂದು ಕಮಲಗಾಣಿಗೆ ಎನ್ನುವವರ ಮನೆ ಕಿತ್ತುಹೋಗಿದ್ದ ಪ್ರಕರಣದ ಬಗ್ಗೆ ವಾದದ ಮಾಡುತ್ತಿದ್ದರು. ನಾನು ಅಲ್ಲಿಗೆ ಹೋದಾಗ, ಓ ವಾದವನ್ನು ಕೋಳುತ್ತಿರುವಾಗ ಆ ಡೆಪ್ಯೂಟಿ ತಹಸೀಲ್ದಾರೆ ಶ್ರೀನಿವಾಸ್ ಅವರು ಜಯರಾಮಶೆಟ್ಟರ ಹತ್ತಿರ ಮಾತನಾಡುವ ಒಂದು ರೀತಿಯನ್ನು ನೋಡಿದಾಗ ಅವರು ಒಂದು ರೀತಿಯ ತೀರ ಉದ್ದಟತನದ ರೀತಿಯಲ್ಲಿ ಮಾತನಾಡುತ್ತಿದ್ದರು. ನಾನು ಆಗ ಅವರಿಗೆ ಇಷ್ಟೇ ಹೇಳಿದೆ, ದಯವಿಟ್ಟು ಅವರು ನಿಮ್ಮ ಸ್ಥಳೀಯ ಶಾಸಕರು, ಅವರ ಹತ್ತಿರ ನೀವು ಸಣ್ಣ ಅಧಿಕಾರಿಯಾಗಿದ್ದು ರೀತಿಯಾಗಿದ್ದು ಈ ರೀತಿಯಾಗು ಮಾತನಾಡಬಾರದು, ಕಮ ಪ್ರಕಾರವಾಗಿ ಹೇಳಿ ಎಂದು ಹೇಳಿದರೆ, ಜಯರಾಮಶೆಟ್ಟರಿಗೆ ಮಧ್ಯಹ್ನ 3-30 ಗಂಟೆಯಿಂದ ಸುಮಾರು ಎಂಟುವರೆ ಗಂಟೆಯತನಕ ಐದು ಗಂಟೆಗಳ ಕಾಲ್ವಧಿಯವರೆಗೆ ತಹಸೀಲ್ದಾರರು,

ಅಸಿಸ್ಟಂಟ್ ಕಮಿಷನರ್‌ರವರು ಬರುತ್ತಾರೆ ನೀವು ಇಲ್ಲಿ ಕುಳಿತುಕೊಳ್ಳಿ ಅವರು ಬಂದಮೇಲೆ ನಿರ್ಧಾರ ಮಾಡೋಣ ಎಂದು ಹೇಳಿದವರು ಎಂಟುವರೆ ತನಕವೂ ತಹಸೀಲ್ದಾರ್‌ರವರು ಮತ್ತು ಎ.ಸಿ.ಯವರು ಪತ್ತೆ ಇಲ್ಲ. ಆಗ ನಾನು ಹೇಳಿದೆ ಹಾಗಾದರೆ ನಾಳೆಯಾದರೂ ಹೋಗೋಣ, ಹೋಗಿ ಇದರ ಬಗ್ಗೆ ಏನು ಎಂಬುದಾಗಿ